ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 02ನೇ ಮಾರ್ಚ್, 2020

ಬೀದರ್ ಬಿ.ಎಸ್.ಎಸ್.ಕೆ. ಕಾರ್ಖಾನೆ ಮುಚ್ಚಿರುವ ಬಗ್ಗೆ

ಶ್ರೀ ಅರವಿಂದ ಕುಮಾರ್ ಅರಳಿ:- (ವಿಧಾನಸಭೆಯಿಂದ ಚುನಾಯಿತರಾದವರು)

01 (51) ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ನ ಜಿಲ್ಲೆಯಲ್ಲಿ ಐದು ಸಹಕಾರಿ ಸಕ್ಕರೆ ಕಾರ್ಖಾನೆಗಳಿದ್ದು ಅವುಗಳೆಲ್ಲವೂ ಹಾನಿಗೊಂಡಿದ್ದು ಮತ್ತು ಸಾಲ ಹೊಂದಿದ್ದು ಇದರಲ್ಲಿ ಅತೀ ಕಡಿಮೆ ಸಾಲ ಮತ್ತು ಹಾನಿಯಿರುವ ಬಿ.ಎಸ್.ಎಸ್.ಕೆ. ಸಹಕಾರ ಸಕ್ಕರೆ ಕಾರ್ಖಾನೆ, ಹಳ್ಳಿಖೇಡ, ಇದನ್ನು ಮಾತ್ರ ಮುಚ್ಚಲಾಗಿದ್ದು ಇನ್ನುಳಿದ ನಾಲ್ಕು ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

(ಆ) ಬೀದರ್ನ ಬಿ.ಎಸ್.ಎಸ್.ಕೆ. ಸಕ್ಕರೆ ಕಾರ್ಖಾನೆಯನ್ನು ಈ ಹಂಗಾಮಿನಲ್ಲಿ ಪ್ರಾರಂಭಿಸದಿರುವುದರಿಂದ ರೈತರು ತೊಂದರೆಗೊಳಗಾಗಿದ್ದು ಈ ಕಾರ್ಖಾನೆಯನ್ನು ಪುನರ್ ಪ್ರಾರಂಭಿಸುವುದು ಯಾವಾಗ; ಪ್ರಾರಂಭಿಸದಿದ್ದಲ್ಲಿ, ಇದಕ್ಕೆ ಸೂಕ್ತವಾದ ಕಾರಣಗಳೇನು?